Clause 1

Mr Deputy Speaker.—The question is:

"That clause 1, the long title the preamble and the enacting formula do stand part of the Bill"

The motion was adopted.

Clause 1, the long title preamble and the enacting formula were added to the Bill.

Motion to Pass

Sri N. Hutchmasthy Gowda.—I beg to move.

"That the Karnataka Rent Control (Amendment) Bill, 1975, as passed by the Legislative Council be passed."

Mr. Deputy Speaker.—The question is ;

"That the Karnataka Rent Control (Amendment) Bill, 1975 a passed by the Legislative Council be passed."

The motion was adopted the Bill was passed.

The Karnataka Debt Relief Bill, 1975

Motion to consider

Sri K.H. Ranganath (Minister for Co-operation).—I beg to move

"That the Karnataka Debt Relief Bill. 1975 be taken into consideration."

Mr. Deputy Speaker.—Motion moved:

"That the Karnataka Debt Relief Bill. 1975 be taken into consideration."

†ಶ್ರೀ ಕೆ.ಹೆಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಕಾನೂನು ಗಾತ್ರದಲ್ಲಿ ಚಿಕ್ಕದಾದರೂ ಕೂಡ ಗುರಿಯಲ್ಲಿ ಬಹಳ ಮಹತ್ವಪೂರ್ಣವಾದ, ಪ್ರಗತಿದಾಯಕವಾದ ಕಾನೂನು ಎಂದು ಹೇಳಿದರೆ ತಪ್ಪಾಗಲಾರದು. ಸಣ್ಣ ಹಿಡುವಳಿದಾರರೂ, ರೈತ ಕೂಲಿಗಾರರು ಮತ್ತು ದುರ್ಬಲ ವರ್ಗಕ್ಕೆ ಸೇರಿರತಕ್ಕ ಜನ ಏನು ಇದ್ದಾರೆ, ಅವರುಗಳನ್ನು ಸಾಲದ ಬಾಧೆಯಿಂದ ಎರಡು ವರ್ಷಗಳು ವಿಮುಕ್ತರನ್ನಾಗಿ ಮಾಡುವುದಕ್ಕಾಗಿ ಈ ಕಾನೂನನ್ನು ತರಲಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ಈ ಕಾನೂನಿನಲ್ಲಿ ಕೆಲವು ಸಾಲಗಳನ್ನು ಹೊರತುಪಡಿಸಲಾಗಿದೆ. ಮತ್ತೆ ಈ ಕಾನೂನಿನಲ್ಲಿ ಸಣ್ಣ ಹಿಡುವಳಿದಾರರು ಯಾರು ಎನ್ನುವುದಕ್ಕೆ ಒಂದು ಉತ್ತಮವಾದಂಥ ಅರ್ಥ ವಿವರಣೆಯನ್ನು ಕೊಡಲಾಗಿದೆ. ಅದು ಏನು ಅಂದರೆ ದುರ್ಬಲವರ್ಗಕ್ಕೆ ಸೇರಿದವರು ಯಾರು ಇದ್ದಾರೆ, ಅವರಿಗೆ ಉತ್ತಮವಾದಂಥ ಅರ್ಥ ವಿವರಣೆಯನ್ನು ಕೊಡಲಾಗಿದೆ. ಯಾರು ಸಣ್ಣ ಹಿಡುವಳಿದಾರರು ಅಲ್ಲವೋ, ರೈತ ಕೂಲಿಗಾರರು ಅಲ್ಲವೋ, ಯಾರ ಆದಾಯ ೨,೪೦೦ ರೂಪಾಯಿಗಳಿಗಿಂತ ಒಳಗೆ ಇರುತ್ತದೆಯೋ, ಅದು ಕಾನೂನಿನ ವ್ಯಾಪ್ತಿಯ ಒಳಗಡೆ ಬರುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಕಾನೂನಿನಲ್ಲಿ ಕಲಮು ೪, ೬, ೭, ೮ ಬಹಳ ಪ್ರಾಮುಖ್ಯವಾಗಿರತಕ್ಕಂಥ ಕಾನೂನಂಗಳು ಇವತ್ತಿನದಿವಸ ಈ ಒಂದು ಸಾಲದಿಂದ ಎರಡು ವರ್ಷಗಳವರೆಗೆ ಆತನಿಗೆ ಬಡ್ಡಿ ಹಾಕದೇ ಇರತಕ್ಕದ್ದು ಮತ್ತು ಅವನಿಂದಾಗಲೀ ಅವನ ಯಾವುದೇ ಚರ ಮತ್ತು ಸ್ಥಿರ ಆಸ್ತಿಗಳಿಂದ ವಸೂಲು ಮಾಡದೇ ಇರತಕ್ಕ ಒಂದು ಪರಿಹಾರವನ್ನು ಅವನಿಗೆ ಕೊಡಲಾಗಿದೆ. ಅಷ್ಟೇ ಅಲ್ಲ, ಯಾವ

ಕೋರ್ಟಿನಲ್ಲಿಯೂ ಕೂಡ ದಾವೆ ಮಾಡದೇ ಇರತಕ್ಕ ಪ್ರತಿಬಂಧಕವನ್ನೂ ಕೂಡ ಈ ಕಾನೂನಿನಲ್ಲಿ ಮಾಡಲಾಗಿದೆ. ಇನ್ನು ಕಾಲಂ ೭ರಲ್ಲಿ ಸಾಲವನ್ನು ಸಾಬೀತು ಮಾಡತಕ್ಕ ಹೊಣೆಗಾರಿಕೆಯನ್ನು ಸಾಲ ಕೊಟ್ಟವನ ಮೇಲೆ ಹೊರಿಸಲಾಗಿದೆ ಮತ್ತೆ ಕಾಲಮು ೮, ಇದರಿಂದ ಯಾವುದೇ ಒಬ್ಬ ವ್ಯಕ್ತಿ ತನ್ನ ಯಾವುದೇ ರೀತಿಯ ಸಾಲವನ್ನು ತನ್ನ ದುಡಿಮೆಯಿಂದ ತೀರಿಸುತ್ತೇನೆಂದು ಯಾವುದಾದರೂ ಸಂಪ್ರದಾಯಿಕವಾಗಿ, ಒಂದು ಅಗ್ರಿಮೆಂಟ್ ಮೂಲಕವಾಗಲೀ ಬಂಧನಕ್ಕೆ ಒಳಗಾಗಿದ್ದರೆ ಅಂಥ ಬಂಧನ ಈ ಕಾನೂನಿಂದ ''ಸಿಂಧು'' ಅಲ್ಲ ಎಂದು ಹೇಳಿ ೯ನೇ ಕಲಮು ಮೂಲಕ ಘೋಷಣೆ ಮಾಡಲಾಗಿದೆ. ಇದರಿಂದ ಇವತ್ತಿನ ದಿವಸ ಲಕ್ಷಾಂತರ ಜನ ಸಣ್ಣ ಹಿಡುವಳಿದಾರರಿಗೆ, ರೈತಕೂಲಿಕಾರರಿಗೆ ಮತ್ತೆ ದುರ್ಬಲ ವರ್ಗಕ್ಕೆ ಸೇರಿರತಕ್ಕ ಜನಕ್ಕೆ ತಾತ್ಕಾಲಿಕ ಪರಿಹಾರವನ್ನು ಕೊಟ್ಟು, ಅವರು ಮಾಡಿದ ಸಾಲಕ್ಕೆ ಬಡ್ಡಿ ಹಾಕದೇ ಇರತಕ್ಕ ರೀತಿಯಲ್ಲಿ, ಎರಡು ವರ್ಷಗಳವರೆಗೆ ರಿಲೀಫ್ ಇರತಕ್ಕ ರೀತಿಯಲ್ಲಿ ತಾತ್ಕಾಲಿಕ ಪರಿಹಾರ ಕೊಡಲಾಗಿದೆ. ಇದೇ ಸಮಯದಲ್ಲಿ ಸಾಲಕೊಟ್ಟವನಿಗೂ ಕೂಡ ಅನುಕೂಲ ಮಾಡಿಕೊಡಲಾಗಿದೆ. ಕಾಲಂ ೫ರ ಪ್ರಕಾರ ಅವನಿಗೂ ಕೂಡ ಒಂದು ಅನುಕೂಲವನ್ನು ಈ ಕಾನೂನಿನಲ್ಲಿ ಮಾಡಲಾಗಿದೆ. ಯಾವ ಒಂದು ಸಣ್ಣ ವರ್ಗದ ಜನ ಇದ್ದಾರೆ, ಅವರ ಅನುಕೂಲಕ್ಕಾಗಿ ತಂದಿರತಕ್ಕ ಈ ಕಾನೂನಿಗೆ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳಿ ಕಾನೂನನ್ನು ಸಭೆಯ ಮುಂದೆ ಮಂಡಿಸುತ್ತೇನೆ.

†ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ೧೯೭೫ನೇ ಇಸವಿ ಕರ್ನಾಟಕ ರಾಜ್ಯದ ಸಾಲಪರಿಹಾರಕ್ಕಾಗಿ ಸಂಬಂಧಪಟ್ಟಂತಹ ವಿಧೇಯಕವನ್ನು ಏನು ತಂದಿದ್ದಾರೆ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಆಡಬೇಕೆಂದು ಇಚ್ಛಿಸುತ್ತೇನೆ. ಈ ವಿಧೇಯಕ ಏನು ಇದೆ ಅದು ಸಮಯೋಚಿತವಾಗಿದೆ. ಮತ್ತು ಪ್ರೋಗ್ರೆಸೀವ್ ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವ ಕಾಲದಲ್ಲಿ ಸಣ್ಣ ಬಿಲ್ ಎಂದು ಹೇಳಿದರು ನಾನು ಇದನ್ನು ಮಹತ್ವಪೂರಿತವಾದ ಬಿಲ್ ಎಂದು ಕರೆಯುತ್ತೇನೆ. ಕಾರಣ, ಪ್ರತಿಯೊಬ್ಬರಿಗೂ ಸಾಲ ಗೊತ್ತಿರತಕ್ಕ ವಿಚಾರ ಸಾಲ ಎಂದರೆ ಶೂಲ, ಅನೇಕ ಜನ ಅಂದರೆ ಗ್ರಾಮಾಂತರ ಪ್ರದೇಶದಲ್ಲಿರುವ ಸುಮಾರು ಶೇಕಡ ೮೦ ರಷ್ಟು ಜನ ಈ ಶೂಲದಲ್ಲಿ ಸಿಕ್ಕಿದ್ದಾರೆ ಆದುದರಿಂದ ಅಂಥವರಿಗೆ ಒಂದು ಪರಿಹಾರ ಮಾಡಿರುವುದು ಸ್ವಾಗತಾರ್ಹವಾಗಿದೆ. ಅದಕ್ಕೋಸ್ಕರವಾಗಿಯೇ ನಾನು ಸಮಯೋಚಿತವಾಗಿದೆ ಎಂದು ಹೇಳಿದ್ದು ಇದನ್ನೇ ಮನಗಂಡು ರಾಷ್ಟ್ರದ ನಾಯಕಿಯರೂ, ಪ್ರಧಾನ ಮಂತ್ರಿಗಳೂ ಆದ ಶ್ರೀಮಂತಿ ಇಂದಿರಾಗಾಂಧಿಯವರು ೨೦ ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಏನು ಹಾಕಿದ್ದಾರೆ, ಅದರಲ್ಲಿ ಇದೂ ಒಂದು ಆಗಿದೆ. ಅದರಲ್ಲಿಯೂ ಬಡ ಜನ, ನೊಂದ ಜನ, ಹಿಂದುಳಿದ ಜನ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಜನ ಈ ಸಾಲಕ್ಕೆ ಒಳಗಾಗಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಶ್ರಮ ಜೀವಿಗಳು ಸಾಲಗಾರರು ಎಂದು ಹೇಳಿದರೆ ತಪ್ಪಾಗಲಾರದು ವ್ಯವಸಾಯ ಕ್ಷೇತ್ರದಲ್ಲಿರಬಹುದು, ಕೈಗಾರಿಕಾ ಕ್ಷೇತ್ರದಲ್ಲಿರಬಹುದು ಈ ಮಸೂದೆಯಲ್ಲಿ ಕೇವಲ ಎರಡು ವರ್ಷ ರಿಲೀಫ್ ಕೊಟ್ಟಿದ್ದಾರೆ, ಪರ್ಮನೆಂಟ್ ಆಗಿ ರಿಲೀಫ್ ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ಉತ್ತರ ಪ್ರದೇಶದಲ್ಲಿ ಇದೇತರಹ ಮಾಡಿದ್ದಾರೆ, ತಮಗೆ ಗೊತ್ತಿರಬಹುದು ಕೆಲವು ಸಂದರ್ಭದಲ್ಲಿ ೫೦-೬೦ ವರ್ಷಗಳಾದರೂ ಸಾಲ ತೀರುವುದಿಲ್ಲ ಅಂಥಾ ಸಂದರ್ಭಗಳು ನಮ್ಮಲ್ಲಿಯೇ ಇದೆ. ಕಾರಣ ಪಾನ್ ಲೇಬರ್ ಬ್ರೋಕರ್ಸ್ ರಕ್ತ ಹೀರುತ್ತಾರೆ. ೩೦-೪೦ ಪರ್ಸೆಂಟ್ ಬಡ್ಡಿ ಹಾಕುತ್ತಾರೆ, ಜಮೀನು ಇಲ್ಲದೇ ಉದ್ಯೋಗ ಇಲ್ಲದೆ ಇರತಕ್ಕ ಜನ ಇದರಿಂದ ಬಹಳ ಕಷ್ಟಪಡಬೇಕಾಗುತ್ತದೆ. ಬಡವರಿಗೇ ಮಕ್ಕಳು ಮರಿಗಳು ಜಾಸ್ತಿ, ಅನೇಕ ಸಂದರ್ಭದಲ್ಲಿ ಮಕ್ಕಳನ್ನು ಜೀತಕ್ಕೋಸ್ಕರ ಬಿಟ್ಟಿರುತ್ತಾರೆ ೬-೭ ವರ್ಷದ ಹುಡುಗ ಇದ್ದರೆ, ಎಮ್ಮೆ ಕಾಯುವುದಕ್ಕೋ ಕುರಿ ಕಾಯುವುದಕ್ಕೋ ಬಿಟ್ಟಿರುತ್ತಾರೆ.

ಯಾವ ಜನರನ್ನು ಗಿರವಿ ಇಟ್ಟುಕೊಂಡಿರುತ್ತಾರೋ ಆ ಒಂದು ಲೇಬರ್ ಏನಿದೆ ಅದನ್ನು ತಪ್ಪಿಸುವುದು ಬಹಳ ಮುಖ್ಯವಾದುದು. ಮಾನ್ಯ ಮಂತ್ರಿಯವರು ೫ ಆಧಾರದ ಮೇಲೆ ಹೇಳಿವರು ಮೂವಬಲ್ ಇಮೂವಬಲ್ ಪ್ರಾಪರ್ಟಿ ಮೇಲೆ ಮಾಡಬಾರದು ಅವರನ್ನು ಕೋರ್ಟಿಗೆ ಹಾಕಬಾರದು; ಸಿವಿಲ್ ಇಂಪ್ರಿಸನ್‌ಮೆಂಟನ್ನು ಬಿಡಿಸಬೇಕು ಎಂದು ಅವರು ಹೇಳಿದ್ದಾರೆ. ಆದರ ಮೂಲ ಉದ್ದೇಶ ಅರ್ಥವಾಗುತ್ತದೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ಇದೆ ಅದೇ ತರಹ ಇಂಡಸ್ಟ್ರಿಯಲ್ ಡೆಟ್ ರಿಲೀಫ್ ಆಕ್ಟ್ ಬಂದರೆ ಒಳ್ಳೆಯದು. ಪಟ್ಟಣದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಇದ್ದ ಹಾಗೆ ಇಲ್ಲಿಯೂ ಸಹ ಇದ್ದಾರೆ ಮುಖ್ಯವಾಗಿ ಪಟ್ಟಣಗಳಲ್ಲಿ ಎಲ್ಲೆಲ್ಲಿ ಕೈಗಾರಿಕೆ ಇದೆಯೋ ಅಲ್ಲಿ ೮೦ ಲಕ್ಷ ಪ್ರಜೆಗಳು ಎಲ್ಲಿ ಇದ್ದಾರೆ ಅಲ್ಲಿಯೂ ಇದ್ದಾರೆ. ಅವರಿಗೂ ಸಹ ಈ ಒಂದು ಪ್ರಯತ್ನ ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಇದು ಹೇಗೆ ಎಂದರೆ ಅನೇಕರು ಕಾರಣಾಂತರಗಳಿಂದ ಗ್ರಾಮಾಂತರ ಪ್ರದೇಶಗಳಿಂದ ವಲಸೆ ಬಂದು ಇಲ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಅವರು ನಿತ್ಯ ಜೀವನಕ್ಕೆ ಇಲ್ಲಿ ಸಂಬಳವನ್ನು ತೆಗೆದುಕೊಳ್ಳುತ್ತಾರೆ. ಅಲ್ಲಿ ಫೋರ್‌ಮನ್‌ಗಳು

ಸೂಪರ್‌ವೈಸರ್‌ಗಳು ಏನು ಇರುತ್ತಾರೆ ಅವರೂ ಸಹ ಸಣ್ಣಸಣ್ಣದಾಗಿ ಬಡ್ಡಿಗೆ ಹಣ ಕೊಡುತ್ತಾ ಇರುತ್ತಾರೆ. ೩೦ ರಿಂದ ೪೦ ಪರ್ಸೆಂಟ್‌ವರೆಗೆ ಬಡ್ಡಿಗೆ ಕೊಡುತ್ತಾರೆ ಅನೇಕ ಸಂದರ್ಭಗಳಲ್ಲಿ ಫ್ಯಾಕ್ಟರಿಯಲ್ಲಿ ಕೆಲಸಮಾಡತಕ್ಕ ಕಾಲದಲ್ಲಿ ಸಂಬಳ ಕೊಡುವ ದಿವಸ ಟಿಕೆಟ್ ಕೊಟ್ಟಿರುತ್ತಾರೆ. ಬಂದಂತಹ ಹಣ ಅವರಿಗೆ ಕೊಟ್ಟು ಹೋಗಿರುತ್ತಾರೆ. ೩೦-೪೦ ಪರ್ಸೆಂಟ್ ಬಡ್ಡಿಯನ್ನು ಕೊಡತಕ್ಕ ಜನ ಇದ್ದಾರೆ ಅದು ಇನ್‌ಕಮ್ ಟ್ಯಾಕ್ಸ್ ಲೆಕ್ಕಕ್ಕೂ ಬರುವುದಿಲ್ಲ ಇದನ್ನು ಲೆಕ್ಕ ಇಡುವ ಪ್ರಮೇಯವೇ ಇಲ್ಲ, ಯಾವ ಫ್ಯಾಕ್ಟರಿಯಲ್ಲಿ ಅವರು ಕೆಲಸಮಾಡುತ್ತಾರೋ ಅವರಿಗೆ ದುಡ್ಡಿನ ಬಗ್ಗೆ ಗ್ಯಾರಂಟಿ ಇರುತ್ತದೆ ಅವರು ಫ್ಯಾಕ್ಟರಿಯಲ್ಲಿ ೧೦ಕ್ಕೆ ೩ ರೂ. ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಅವರ ಬಗ್ಗೆಯೂ ಸಹ ಈ ತರಹ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ ಜೊತೆಗೆ ತಮಗೆ ಗೊತ್ತಿರಬಹುದು ಕೇವಲ ಫ್ಯಾಕ್ಟರಿ ಲೇಬರರ್ಸ್ ಈ ತರಹ ಲೇವಾದೇವಿಯನ್ನು ಮಾಡುತ್ತಾರೆಂದು ಇಲ್ಲ, ಸರ್ಕಾರಿ ನೌಕರರೂ ಸಹ ಲೇವಾದೇವಿ ಮಾಡುವುದನ್ನು ಕೇಳಿದ್ದೇನೆ. ಅನೇಕ ಆಫೀಸ್‌ಗಳಲ್ಲಿ ನಾನು ನೋಡಿದ್ದೇನೆ ಸಂಬಳ ಬರತಕ್ಕ ಕಾಲದಲ್ಲಿ ಈ ಬಡ ಜನ ೫ ರೂ ನಿಂದ ೧೦ ರೂವರೆಗೆ ಬಡ್ಡಿಯನ್ನು ಕೊಡುತ್ತಾರೆ ಸಂಬಳ ಬಂದ ತಕ್ಷಣ ಅಲ್ಲಿ ಲೇವಾದೇವಿ ಮಾಡುವವರಿಗೆ ಬಡ್ಡಿಯನ್ನು ಕೊಟ್ಟುಬಿಟ್ಟು ಹೋಗುತ್ತಾರೆ. ಇವಕ್ಕೆ ಯಾವುದಾದರೂ ಕಾನೂನನ್ನು ತಂದರೆ ಬಡ ಜನರಿಗೆ ಸಹಾಯವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಿನಿಮಮ್ ವೇಜಸ್ ತರಬೇಕೆಂದು ಮಾಡಿದ್ದಾರೆ. ಮಿನಿಮಮ್ ವೇಜಸ್ ಕಾನೂನನ್ನು ತಂದರೂ ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ ಇಂಪ್ಲಿಮೆಂಟ್ ಆಗಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು; ಇಂಡಸ್ಟ್ರಿಯಲ್ ಲೇಬರರ್ಸ್‌ಗೆ ಮಿನಿಮಮ್ ವೇಜಸ್ ತರಬೇಕೆಂದು ಮಾಡಿದ್ದಾರೆ ಅದು ಸ್ವಲ್ಪಮಟ್ಟಿಗೆ ಕಾರ್ಯಗತವಾಗಿದೆ, ಇಂಡಸ್ಟ್ರಿಯಲ್ ಲೇಬರ್ಸ್ ತರಹ ಅಗ್ರಿಕಲ್ಚರಲ್ ಲೇಬರ್ಸ್ ಅಷ್ಟರ ಮಟ್ಟಿಗೆ ಆರ್ಗನೈಸ್ ಆಗಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು ಹೀಗಿರುವಾಗ ಬಡವರು ಈ ಸಾಲದ ಶೂಲಕ್ಕೆ ಸಿಕ್ಕಿದ್ದಾರೆ. ಮುಖ್ಯ ಮಂತ್ರಿಗಳು ಮೊನ್ನೆ ಹೇಳಿದರು ಕಡು ಬಡವರು ಯಾರು ಇದ್ದಾರೆ ಅವರ ಸಾಲದ ಹೊರೆಯನ್ನು ಸರ್ಕಾರ ವಹಿಸಿಕೊಂಡು ಸಾಲ ತೀರಿಸುತ್ತದೆ ಎಂದು ಹೇಳಿದರು. ಇದು ಸರ್ಕಾರದ ಒಂದು ದಿಟ್ಟತನದ ಹೆಜ್ಜೆ ಎಂದು ಹೇಳಿದರೆ ತಪ್ಪಾಗಲಾರದು. ಹೀಗಿರುವ ಸಂದರ್ಭದಲ್ಲಿ ಸಾಲ ತೆಗೆದುಕೊಳ್ಳುವವರು ಬುದ್ಧಿವಂತರು ಕೊಡುವಾಗ ಬೇಜಾರು ಪಡುತ್ತಾರೆ. ಇನ್ನೂ ಒಂದು ಉದಾಹರಣೆಯನ್ನು ಹೇಳುತ್ತೇನೆ ಸೊಸೈಟಿಗಳಲ್ಲೂ ಇದೇ ರೀತಿ ನಡೆಯುತ್ತದೆ. ನಾನು ಒಂದು ಸಂದರ್ಭದಲ್ಲಿ ಇದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ: ಈ ಸೊಸೈಟಿಗಳಲ್ಲಿ ಲೇವಾದೇವಿಯು ನಡೆಯುತ್ತಿರುತ್ತದೆ. ಸೊಸೈಟಿ ಎಂದರೆ ಗಂಟು ನುಂಗುವುದು ಎಂದು ಅರ್ಥ ಮಾಡಿಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ರೈತರು ಮತ್ತು ಅಧಿಕಾರಿಗಳು ಇರುತ್ತಾರೆ ಇಬ್ಬರೂ ಸಹಕರಿಸಿ ಸೊಸೈಟಿಯನ್ನು ಮುಳುಗಿಸುತ್ತಾರೆ ವಿಜಿಲೆನ್ಸ್ ಕಮಿಷನ್‌ನ ವ್ಯಾಪ್ತಿ ಈ ಸೊಸೈಟಿಗಳ ಮೇಲೆ ಇಲ್ಲದೆ ಅವುಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ತಪ್ಪು ಮಾಡಿದವರಿಗೆ ತಾವು ಶಿಕ್ಷೆ ವಿಧಿಸುತ್ತೀರಿ ಹಾಗೆಯೇ ಸೊಸೈಟಿಗಳನ್ನು ಚೆಕ್ ಮಾಡುವುದಕ್ಕೆ ವಿಜಿಲೆನ್ಸ್ ಕಮಿಷನ್‌ಗೆ ಕಾನೂನು ಪ್ರಕಾರ ಅಧಿಕಾರ ಕೊಡಬೇಕೆಂದು ಸರ್ಕಾರದವರ ಮುಂದೆ ಸಲಹೆ ಕೊಡಲು ಇಚ್ಛೆಪಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಬಡವರ ಬಾಳನ್ನು ಸುಖಮಯವಾಗಿ ನಡೆಸುವುದಕ್ಕೋಸ್ಕರ ೨ ವರ್ಷಗಳ ಕಾಲ ಸಾಲದ ತಂಟೆಗೆ ಹೋಗಬಾರದು, ಬಡ್ಡಿಯನ್ನು ಕೇಳಬಾರದು ಎಂದು ಮುಖ್ಯ ಮಂತ್ರಿಗಳು ಏನು ತಂದಿದ್ದಾರೆ ಇದು ಸ್ವಾಗತಾರ್ಹವಾದುದು ಮತ್ತು ಇದರಿಂದ ಹೆಚ್ಚು ಬಡವರಿಗೆ ಅನುಕೂಲವಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು) —ಮಾನ್ಯ ಅಧ್ಯಕ್ಷರೇ, ಒಂದು ರೂಪದಲ್ಲಿ ಈ ಋಣಮುಕ್ತಿಗೆ ಸಂಬಂಧಪಟ್ಟ ಈ ಕಾನೂನನ್ನು ಮೆಚ್ಚತಕ್ಕದ್ದಾಗಿದೆ. ಈ ಸಾಲಕ್ಕೆ ಸಂಬಂಧಪಟ್ಟ ಹಾಗೆ ಕಾನೂನನ್ನು ೨ ವರ್ಷದಮಟ್ಟಿಗೆ ಈ ಸಾಲ ವಸೂಲು ಮಾಡುವುದರ ಬಗ್ಗೆ ಇರತಕ್ಕ ತೊಡಕುಗಳು ಅತನಿಗೆ ಹಿಂಸೆ ಮಾಡಬಾರದು, ಈ ಎರಡು ವರ್ಷದಲ್ಲಿ ಬಡ್ಡಿಯನ್ನು ವಸೂಲು ಮಾಡಬಾರದು ಎನ್ನತಕ್ಕಂಥಾದ್ದು ಸಾರಾಂಶವಾಗಿ ಇರತಕ್ಕಂಥಾ ವಿಚಾರ. ಆದರೆ ೨ ವರ್ಷ ಆದಮೇಲೆ ಸಾಲ ಕೊಡುವಂತವನಿಗೆ ೨ ವರ್ಷದ ಬಡ್ಡಿ ಹೋತಾ ಆಯಿತು ಎಂದು ಇದರಿಂದ ವಿಧಿತವಾಗುತ್ತದೆ. ಹೆಚ್ಚು ಬಡ್ಡಿ ತೆಗೆದುಕೊಂಡಿದ್ದಾನೆ ಅಥವಾ ಸಾಲ ಕೊಡುವವನಿಗೆ ಹೆಚ್ಚು ಹಿಂಸೆ ಮಾಡಿ ತೊಂದರೆಗೆ ಈಡು ಮಾಡಿದ್ದಾನೆ ಎಂದರೆ ಇದು ಒಂದು ತರಹ ಕಾಂಪೆನ್‌ಸೇಷನ್ ಕೊಟ್ಟಹಾಗೆ ಆಗುತ್ತದೆ. ಅದರ ಬದಲು ಇಂತಿಷ್ಟು ಸಾಲ ಕೊಡತಕ್ಕ ಮಿತಿಯುಳ್ಳ ಜನ ವೀಕರ್ ಸೆಕ್ಷನ್. ಕೂಲಿಗಾರರಿಗೆ ಸಾಲದ ಭೀತಿಯನ್ನು ತಪ್ಪಿಸುವುದಕ್ಕೆ ಶೇಕಡ ಇಂಟರೆಸ್ಟನ್ನು ೧೦೦ ರೂಪಾಯಿ ಸಾಲ ತೆಗೆದುಕೊಂಡು ೧೦೦ರೂ ಮೇಲೆ ಬಡ್ಡಿ ತೆಗೆದುಕೊಂಡರೆ ಆ ಸಾಲವನ್ನು ವಜಾ ಮಾಡಬೇಕು ಎಂದು ಎನ್ನುವುದು ಉತ್ತಮವಾಗಿರತಕ್ಕ ಕಾನೂನು. ಅದನ್ನು ಕೆಲವು ರಾಜ್ಯಗಳಲ್ಲಿ ಮಾಡಿದ್ದಾರೆ, ಮತ್ತು ಬೊಂಬಾಯಿ ಮುಂತಾದ ಕಡೆಗಳಲ್ಲಿ ಆಗಿದೆ. ಇಷ್ಟು

ಬಡ್ಡಿಯನ್ನು ತೆಗೆದುಕೊಂಡಮೇಲೆ ಅಸಲನ್ನು ಬಿಟ್ಟುಬಿಡುವುದು ಎಂದು ಮಾಡಿದ್ದರೆ ಒಂದೇ ಸಲ ಋಣಮುಕ್ತಿ ಆಗುತ್ತಾ ಇತ್ತು ಎಂದು ತಿಳಿದುಕೊಳ್ಳಬೇಕಾಗಿದೆ. ಈ ಕಾನೂನಿನಿಂದ ಹೆಚ್ಚಿನ ಉಪಕಾರ ವಾಗುತ್ತದೆ ಎಂದು ಮಂತ್ರಿಗಳು ಹೇಳಿದ್ದಾರೆ ಮುಖ್ಯವಾಗಿ ಬಡವರ ವಿಷಯದಲ್ಲಿ ಹೆಚ್ಚಿನ ಉಪಕಾರ ವಾಗುತ್ತದೆಂದು ಹೇಳಿದ್ದಾರೆ ಅವರು ಪಾಪ್ಯುಲರ್ ಆಗಿರುವುದರಿಂದ ವರ್ಷದಲ್ಲಿ ಏನು ಉಪಕಾರ ಆಗಬೇಕೆಂದು ಇದನ್ನು ತಂದಿದ್ದಾರೆ. ಅದನ್ನು ಜನರಿಗೆ ಅರ್ಥ ಮಾಡಿಕೊಳ್ಳುವುದು ಕಷ್ಟ. ಇದಗಲ್ಲಿ ಇದು ೫ ವರ್ಷ ಏತಕ್ಕೆ ಆಗಬಾರದು.

ಶ್ರೀ ಡಿ. ದೇವರಾಜ ಅರಸ್.—ಇದು ಸದ್ಯಕ್ಕೆ ಇಷ್ಟು ಇರಲಿ.

ಶ್ರೀ ಕೆ. ಪ್ರಭಾಕರ್.—ಬಡವರ ವಿಷಯದಲ್ಲಿ ಒಂದು ರೂಪದಲ್ಲಿ ಈ 20 ಅಂಶಗಳ ಪ್ರೋಗ್ರಾಮ್ ನಿಂದ ಜನಗಳಿಗೆ ಉಪಕಾರವಾಗುತ್ತದೆ ಎಂದು ಹೇಳಿದ್ದಾರೆ, ಅದರಲ್ಲೂ ಕೂಡ ಒಂದು ರೂಪದಲ್ಲಿ ಸ್ಟೆಪ್ ಇನ್ ಡೆಟ್ ಡೈರೆಕ್ಷನ್ ಎಂದು ಅಂದುಕೊಳ್ಳಬಹುದು. ಬಡವರ ವಿಷಯದಲ್ಲಿ ವಿಶ್ವಾಸವಿರುವ ಸರ್ಕಾರ ಕಾನೂನನ್ನು ಮಾಡುವಾಗ ಒಂದು ರೂಪದಲ್ಲಿ ಎಕ್ಸ್‌ಟೆಂಡ್ ಮಾಡುತ್ತಾರೆ. ಒಂದುವೇಳೆ ಇದರಿಂದ ಉಪಕಾರ ಆಗುವುದಾದರೆ ಯಾರು ಸಾಹುಕಾರರು ಇದ್ದಾರೆ ಅವರು ಮುಂದೆ ಈ ಬಗ್ಗೆ ಏನೇನು ತೊಡಕಿನ ಕಾನೂನು ಬರುತ್ತದೋ ಹೇಗೋ ಎಂದು ಬುದ್ಧಿವಂತರಾದವರು ಅಸಲನ್ನು ಕೊಟ್ಟುಬಿಡು ಮುಂದಿನ ತೊಡಕುಗಳೇ ಬೇಡ ಎಂದು ಯೋಚನೆ ಮಾಡುವುದಕ್ಕೆ ಕೂಡ ಇದರಲ್ಲಿ ಅವಕಾಶ ಇದೆಯೆಂದು ಊಹೆ ಮಾಡಿಕೊಳ್ಳಬಹುದು. ಲ್ಯಾಂಡ್‌ಲೆಸ್ ಆಗಿರುವವರಿಗೆ ದಾವಾ ಹಾಕುವುದು, ಆತನಿಗೆ ತೊಂದರೆ ಕೊಡುವುದು, ಕೊಟ್ಟಿರುವ ಸಾಲವನ್ನು ಡಿಕ್ರಿ ಮಾಡಿದರೆ ಅವರನ್ನು ಜೈಲಿಗೆ ಕಳಿಸುವುದು ಅಲ್ಲದೆ ಬೇರೆ ಮಾರ್ಗವೇ ಇಲ್ಲ. ಈ ಕಾನೂನಿನಿಂದ ಏನು ಉಪಕಾರ ಆಗುತ್ತದೆ ಎಂದರೆ ನಿರ್ಗತಿಕರಿಗೆ ಸಾಲ ಕೊಟ್ಟಿದ್ದರೆ ಅವರಿಗೆ ಕೊಟ್ಟವನು ಕೆಟ್ಟ ಎಂದು ಹೇಳುವ ಅಂತರ್ಗತ ಭಾವನೆ ಇದೆ. ಸರ್ಕಾರದವರು ಈ ಬಡವರಿಗೆ ಸಾಲ ಕೊಟ್ಟವನು ಕೆಟ್ಟ ಎಂದು ಲೀಗಲ್ ಆಗಿ ಹೇಳುವುದು ಕಷ್ಟ. ಈ ಕಾನೂನಿನಿಂದ ಉಪಕಾರ ಏನು ಎಂದರೆ ಗತಿ ಇಲ್ಲದವರಿಗೆ ಸಾಲ ಕೊಡಬೇಡಿ. ಅವರಿಗೆ ಹಿಂಸೆ ಕೊಡಬೇಡಿ, ಅವರಿಗೆ ಚಿತ್ರಹಿಂಸೆ ಕೊಡುವುದು ಹೋಯಿತು ಎನ್ನುವುದು ಕಾನೂನಿನಲ್ಲಿ ಇದೆಯೆಂದು ನನ್ನ ಭಾವನೆ.

1-00 P. M.

ಹೀಗಾಗಿ ಎರಡು ವರ್ಷದಲ್ಲಿ ಒಳ್ಳೆಯದಾಗುವುದರಿಂದ ಸರ್ಕಾರದವರು ಮುಂದೆ ಏನು ಯೋಚನೆ ಮಾಡುತ್ತಾ ಇದ್ದಾರೆ, ಅದಕ್ಕೆ ಸಾಧನೆ ಇದರಲ್ಲಿ ಅಡಕವಾಗಿದೆ ಎಂದು ನಾವು ಅಂದುಕೊಳ್ಳಬೇಕಾಗಿದೆ. ಸರ್ಕಾರ ಕೊಡುವ ಸಾಲ ಸ್ಟೇಟ್ ಗೌವರ್ನಮೆಂಟ್ ಮತ್ತು ಸೆಂಟ್ರಲ್ ಗೌವರ್ನಮೆಂಟಿಗೆ ಕೊಡುವ ಸಾಲ ಇದಕ್ಕೆ ಅನ್ವಯಿಸುವುದಿಲ್ಲವೆಂದು ಹೇಳುತ್ತೇನೆ. ಒಂದು ವಿಷಯವನ್ನು ಮಂತ್ರಿಗಳು ಉತ್ತರ ಹೇಳುವ ಕಾಲಕ್ಕೆ ನಿರೀಕ್ಷಿಸುತ್ತೇನೆ. ಸರ್ಕಾರದವರು ಸಕಾಲದಲ್ಲಿ ಸಾಲ ಕೊಡದಿದ್ದರೆ ಪೀನಲ್ ಇಂಟರೆಸ್ಟ್ ಹಾಕುವ ಪದ್ಧತಿ ಇದೆ. ಸರ್ಕಾರದವರು ಈ ಪದ್ಧತಿಯನ್ನು ಅನುಸರಿಸುವಾಗ ಕಡಿಮೆ ಬಡ್ಡಿಯನ್ನು ಮಾಡದೆ ಹೋದರೆ......

ಶ್ರೀ ಡಿ. ದೇವರಾಜ ಅರಸ್.—ಬಡ್ಡಿ ಇಲ್ಲದೆ ಕೊಡುವ ದುಡ್ಡನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಪ್ರಭಾಕರ್.—ಕೊಟ್ಟಸಾಲಕ್ಕೆ ಚಕ್ರಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಮಗೆ ಸಾಲವೇಬೇಡ ಎಂದು ಹೇಳಿದರೆ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಫೈನಾನ್ಸ್ ಕೊಟ್ಟುಬಿಟ್ಟರೆ ಹಾಗೆ ಮಾಡಬಹುದು.

ಶ್ರೀ ಕೆ. ಪ್ರಭಾಕರ್.—ಸಾಹುಕಾರರು ಸಾಲ ಕೊಟ್ಟಮೇಲೆ ಸಾಲಗಾರರಿಗೆ ಚಾಟಿ ಏಟು ಹೊಡೆಯುವುದು ಹಿಂಸೆ ಕೊಡುವುದರ ಜೊತೆಗೆ ಜೀತಕ್ಕೆ ಇಟ್ಟುಕೊಳ್ಳುವ ಚಿತ್ರಹಿಂಸೆ ಏನು ಇದೆ ಅವುಗಳನ್ನು ಮಾಡದಂತೆ ಸೂಚನೆ ಇತ್ತು . ಈ ಕಾನೂನಿನಿಂದ ಲಾಭವಾಗುವಂತೆ ನೋಡಿಕೊಳ್ಳಬೇಕು. ಹೀಗೆ ಎಷ್ಟೋ ಪ್ರಗತಿದಾಯಕವಾದ ಕಾನೂನನ್ನು ಸರ್ಕಾರದವರು ಬಡವರಿಗಾಗಿ ಮಾಡತಕ್ಕದ್ದು ಇದೆ. ಎನ್ನುವುದಕ್ಕೆ ಇದೊಂದು ಸೂಚನೆ ಹಳ್ಳಿಗಳಲ್ಲಿ ಸಾಲ ಕೊಡುವವರು ನಂಬಿಕೆಮೇಲೆ ಸಾಲ ಕೊಟ್ಟಿರುತ್ತಾರೆ ಒಬ್ಬರಿಗೊಬ್ಬರಿಗೆ ವಿಶ್ವಾಸ ಕೆಲವು ಸಂದರ್ಭದಲ್ಲಿ ಬರುತ್ತದೆ. ಪ್ರಮಾಣ ವಚನವನ್ನು ಬಾಯಲ್ಲಿ ಹೇಳಿರುವುದನ್ನು ಒಂದನ್ನು ಬಿಟ್ಟರೆ ಕಾಗದ ಪತ್ರ; ಪತ್ರಗಳ ಆಧಾರ ಏನು ಇರುವುದಿಲ್ಲ. ಇಂಥ ಸಾಲಗಳು ಮುಂದೆ ನಡೆಯುವುದಿಲ್ಲ. ಸಾಲ ಕೊಡಬೇಕಾದರೆ ಬರವಣಿಗೆ ಜೊತೆಗೆ ಜೀತಕ್ಕೆ ಇರಬೇಕು ಎಂದು ಹೇಳುವುದು ತಪ್ಪು. ಈ ಕಾನೂನಿನಿಂದ ಪ್ರಯೋಜನವಾಗುತ್ತದೆ ಎಂದು ಹೇಳುತ್ತೇನೆ. ಕಡೆಯದಾಗಿ ಸಾಹುಕಾರರು ಅವರು ಹೊಸದಾಗಿ ಕೊಟ್ಟ ಹಣವನ್ನು ಬಾಂಬೆಯಲ್ಲಿ ಏನು ಮಾಡಿದ್ದಾರೆಂದರೆ ಬಡ್ಡಿಗೂ ಅಸಲಿಗೂ ಮಧ್ಯೆ ಇಷ್ಟು ಬಡ್ಡಿಯನ್ನು ತೆಗೆದುಕೊಂಡಿದ್ದರೆ, ಇಷ್ಟು ಅಸಲ

ಕಟ್ಟಬೇಕೆಂದು ಇದೆ. ಅಷ್ಟು ಬಡ್ಡಿ ಕಟ್ಟಿದ್ದರೆ ಅಂಥ ಪತ್ರವನ್ನು ತೆಗೆದುಕೊಂಡುಹೋಗಿ ದಾವ ಹಾಕಿದರೂ ಏನು ಪ್ರಯೋಜನವಾಗುವುದಿಲ್ಲ, ಇಂಥ ಕಾನೂನನ್ನು ಮಾಡಿದ್ದರೆ ಚೆನ್ನಾಗಿತ್ತು. ೨ ವರ್ಷದಲ್ಲಿ ಎಷ್ಟೋ ಜನರು ಇದರಿಂದ ಋಣಮುಕ್ತರಾಗುತ್ತಿದ್ದರು, ಈ ರೀತಿಯಾಗಿ ಮುಂದೆ ಉತ್ತಮವಾದ ಕಾನೂನು ಮಾಡುತ್ತಾರೆ ಎಂಬ ನಿರೀಕ್ಷೆ ಇದೆ. ಸರ್ಕಾರದವರು ಈ ಬಗ್ಗೆ ಖಚಿತವಾಗಿ ಎರಡು ವರ್ಷದ ಪೀರಿಯಡ್‌ನಲ್ಲಿ ಬರುವ ಅನುಭವ ಇಟ್ಟುಕೊಂಡು ಬಡವರಿಗೆ ಬಹಳ ಉಪಕಾರವಾಗುವ ರೀತಿಯಲ್ಲಿ ಮಾಡುತ್ತಾರೆಂದು ನಂಬಿ ಈ ಕಾನೂನಿಗೆ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).— ಮಾನ್ಯ ಸಹಕಾರ ಮಂತ್ರಿಗಳು ಏನು ಈ ಬಿಲ್ಲನ್ನು ತಂದಿದ್ದಾರೆ, ಅವರಿಗೆ ಹೃತ್ಪೂರ್ವಕವಾಗಿ ಬಿಲ್ಲನ್ನು ತಂದುದರ ಬಗ್ಗೆ ವಂದಿಸುತ್ತೇನೆ. ಈ ಬಿಲ್ಲಿನಲ್ಲಿ ಇನ್ನೂ ಬಹಳ ಸ್ಕೋಪ್ ಇತ್ತು ನಮ್ಮ ಕೈಯಿಂದ ಹೆಚ್ಚು ಕೆಲಸಮಾಡುವುದಕ್ಕೆ ಅವಕಾಶವಿತ್ತು. ಈಗಲೂ ಕೂಡ ಇದರ ಮೇಲೆ ವಿಮರ್ಶೆ ಮಾಡುವುದಕ್ಕೆ ಸಾಧ್ಯವಿದ್ದರೆ ನೋಡಿ ಎಂದು ಹೇಳಿ ನಾಲ್ಕು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಹುಟ್ಟಿದ್ದು ಹಳ್ಳಿಯಲ್ಲಿ. ಬೆಳೆದದ್ದು ಹಳ್ಳಿಯಲ್ಲಿ ರೈತಾಪಿ ಜೀವನದಲ್ಲಿ ಡೆಟರ್ಸ್ ರೂರಲ್ ಏರಿಯಾ ಏನು ಇದೆ ಅದನ್ನು ಸ್ವಲ್ಪ ರಿಪೇರಿ ಮಾಡುವುದಕ್ಕೆ ಸಾಧ್ಯತೆ ಇದೆ. ಹಳ್ಳಿಗಳಲ್ಲಿ ಬಿತ್ತುವುದಕ್ಕೆ ಬಿತ್ತನೆ ಬತ್ತವನ್ನು ಕೊಡುತ್ತಾರೆ. ಪ್ರತಿವರ್ಷ ೫ ಕೆ. ಜಿ. ಬಿತ್ತನೆ ಸಲುವಾಗಿ ಕೊಟ್ಟರೆ ಅದನ್ನು ಮುಂದಿನ ವರ್ಷ ೧೦ ಕೆ. ಜಿ. ಕೊಡಬೇಕು, ಅದರ ಮುಂದಿನ ವರ್ಷಕ್ಕೆ ೧೦ ಕೆ. ಜಿ. ಕೊಡಬೇಕು. ಅದರ ಮುಂದಿನ ವರ್ಷ ೨೦ ಕೆಜಿ. ಕೊಡಬೇಕು ಹೇಗೆ ಹೆಚ್ಚಿಕೊಂಡು ಹೋಗುತ್ತಿರುತ್ತದೆ. ಬಿತ್ತನೆಗೆ ಬತ್ತಕೊಟ್ಟಿದ್ದು ಅಷ್ಟೇ ಅಲ್ಲ ಹಳ್ಳಿಗಳಲ್ಲಿ ಕೆಲವು ಲೀನ್‌ಮಂತ್ ಎಂದು ಬರುತ್ತವೆ. ಆ ಲೀನ್ ಮಂತ್‌ದಲ್ಲಿ ಊಟಕ್ಕಾಗಿ ಹತ್ತು ಇಪ್ಪತ್ತೈದು ಕೆಜಿ. ಸಾಲವಾಗಿ ತೆಗೆದುಕೊಂಡರೆ ಅದಕ್ಕೆ ಎರಡುವರ್ಷ ಇಂಟರೆಸ್ಟ್ ಕಟ್ಟಿದರೂ ಕೂಡ ಸಾಲ ತೀರವ ಸನ್ನಿವೇಶ ಇದೆ. ೨ ವರ್ಷದ ಸಲುವಾಗಿ ಈ ಒಂದು ಕಾನೂನನ್ನು ತಂದರೆ ಏನು ಸ್ಕೋಪ್ ಇದೆ. ಆದ್ದರಿಂದ ಇದಕ್ಕಿಂತ ಹೆಚ್ಚು ಲಾಭದಾಯಕವಾಗಿ ಮಾಡುವುದಕ್ಕೆ ಒಂದು ಸೆಂಟ್ರಲ್ ಲೆಜಿಸ್ಲೇಷನ್ ತರುವುದಕ್ಕೋಸ್ಕರ ಇದು ಮೊದಲನೆ ಹೆಜ್ಜೆ ಮತ್ತು ಮೊದಲನೆ ಮೆಟ್ಟಲು ಎಂದು ತಿಳಿದುಕೊಂಡು ಅಡ್ಮಿನಿಸ್ಟ್ರೇಷನ್ ಲೆಜಿಸ್ಲೇಷನ್ ಏನು ಇದೆ ಅದಕ್ಕೆ ಸ್ವಲ್ಪಮಟ್ಟಿಗೆ ತಾತ್ಪೂರ್ತಿಕ ರಿಲೀಫ್ ಕೊಡುವುದಕ್ಕೆ ತಂದಿದ್ದೀರೆಂದು ತಿಳಿದುಕೊಳ್ಳಬೇಕಾಗಿದೆ. ಇನ್ನು ಮುಂದೆ ನಿಸ್ಸಹಾಯಕರಿಗೆ ಹೆಚ್ಚು ಸಹಾಯ ಮಾಡುವುದಕ್ಕೆ ಸ್ಕೋಪ್ ಇದೆ ಎಂದು ತಿಳಿದುಕೊಂಡಿದ್ದೇನೆ. ೨೪೦೦ ರೂಪಾಯಿ ವರ್ಷದ ವರಮಾನ ನಿರ್ಗತಿಕರಾದ ಕೂಲಿಗಾರರಿಗೆ ವ್ಯವಸಾಯಗಾರರಿಗೆ ಏನು ಇದೆ ಅವರಿಗೆ ಇದರಿಂದ ಏನು ಸಹಾಯವಾಗುವುದಿಲ್ಲ. ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ಬಿಲೋ ಪಾವರ್ಟಿ ಲೈನು ಜನರು ಇದ್ದಾರೆ ಅವರಿಗೆ ಸಹಾಯ ಮಾಡಬೇಕು ಎನ್ನುವ ಸದುದ್ದೇಶದಿಂದ ಈ ಬಿಲ್ಲನ್ನು ತಂದಿರುವುದು. ಆದರೆ ೨೪೦೦ ರೂಪಾಯಿ ಮಾಡುವುದಕಿಂತ ನಾಲ್ಕುಸಾವಿರ ಸಾಧ್ಯವಿದ್ದರೆ ೫ ಸಾವಿರ ರೂಪಾಯಿ ಮಾಡಿದ್ದರೆ ಚೆನ್ನಾಗಿತ್ತು ಹಾಗೆ ಮಾಡಿದ್ದರೆ ವೆಸ್ಟೆಡ್ ಇಂಟರೆಸ್ಟ್‌ಗೆ ಸಹಾಯ ಮಾಡಿದಂತಾಗುವುದಿಲ್ಲ. ಅರ್ಧಹೊಟ್ಟೆ ಉಣುವವರಿಗೆ ಇನ್ನೊಂದು ತುತ್ತು ಹೆಚ್ಚಿಗೆ ಊಟ ಮಾಡುವುದಕ್ಕೆ ಸಹಾಯ ಮಾಡಿದಂತಾಗುತ್ತಿತ್ತು. ಹೆಚ್ಚು ಹೆಚ್ಚು ಬಿಲೋಪಾವರ್ಟಿ ಲೈನ್‌ನಲ್ಲಿ ಇರುವವರಿಗೆ ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ಈ ಲಿಮಿಟ್ಟನ್ನು ಜಾಸ್ತಿ ಮಾಡುತ್ತೀರಾ ?

ಇನ್ನೊಂದು ಇಂಡಸ್ಟ್ರೀಸ್ ಅರ್ಬನ್ ಏರಿಯಾದಲ್ಲಿ ಪಾವರ್ಟಿ ಇದೆ. ರೂರಲ್ ಏರಿಯಾ ಪಾವರ್ಟಿ ಅರ್ಬನ್ ಏರಿಯಾ ಪಾವರ್ಟಿಗೆ ಡಿಫರೆನ್ಸಿಯೇಟ್ ಮಾಡಬಾರದು. ಇಂಡಸ್ಟ್ರೀಸ್ ವರ್ಕರ್ ಯಾರಿಗೆ ವರಮಾನ ಕಡಿಮೆ ಇದೆ ಅಂತವರಿಗೆ ಅನ್ವಯವಾಗುವಂತೆ ಮಾಡಿದರೆ ನಮ್ಮ ಸೋಷಿಯಲ್ ಜಸ್ಟೀಸ್‌ನಿಂದ ಹೆಚ್ಚು ಹೆಚ್ಚು ಜನ ಬಡವರಿಗೆ ಸಹಾಯ ಮಾಡಿದಂತಾಗುತ್ತದೆ, ಆದ್ದರಿಂದ ಈ ಸಲಹೆಯನ್ನು ಒಪ್ಪಿಕೊಳ್ಳುತ್ತಾರೆನ್ನುವ ನಂಬಿಕೆ ನನ್ನಲ್ಲಿದೆ.

ಮೂರನೆ ಸಲಹೆ ಏನು ಎಂದರೆ ಲ್ಯಾಂಡ್ ಟ್ರಿಬ್ಯೂನಲ್ ಬಗ್ಗೆ ಹೇಳಬೇಕಾಗಿದೆ. ಈ ಸಮಯ ಎಷ್ಟು ಅಮೂಲ್ಯವಾಗಿದೆ ಎನ್ನುವುದನ್ನು ತಿಳಿದುಕೊಂಡು ಈ ತುರ್ತು ಪರಿಸ್ಥಿತಿಯಲ್ಲಿ ಎಷ್ಟೋ ನಮ್ಮ ಹಕ್ಕುಗಳನ್ನು ಕಳೆದುಕೊಳ್ಳುವುದಕ್ಕೆ ಈ ಮನೆ ಅವಕಾಶ ಕೊಡುವುದಿಲ್ಲವೆಂದು ತಿಳಿದುಕೊಂಡು ಒಂದೆರಡು ಸಲಹೆ ಕೊಡುತ್ತೇನೆ. ಹಳ್ಳಿಯಲ್ಲಿ ಸಾಲ ಕೊಡುತ್ತಾರೆ. ಆ ಸಾಲಕ್ಕೆ ಡಾಕ್ಯುಮೆಂಟ್ಸ್ ಯಾವುದು ಇರುವುದಿಲ್ಲ ಸಾಲ ವಯಕ್ತಿಕವಾಗಿ ಹೆಚ್ಚು ನಂಬಿಕೆ ಇರುತ್ತದೆ. ಸಾಲ ತೆಗೆದುಕೊಂಡವನು ಸತ್ತರೂ ಕೂಡ ಅವನ ಮಕ್ಕಳು ಸಾಲ ತೀರಿಸುತ್ತಾರೆ ಎನ್ನುವ ನಂಬಿಕೆ ಇರುತ್ತದೆ. ೧೦೦ ರೂಪಾಯಿಗಳಿಂದ ೧೦ ಸಾವಿರ ರೂಪಾಯಿಗಳಿಗೂ ಕಾಗದ ಪತ್ರಗಳು ಇರುವುದಿಲ್ಲ. ಆದ್ದರಿಂದ ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ. ಟೆನನ್ಸಿ ಕೇಸ್‌ನಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಹಿಂದುಳಿದ ಭಾಗದಲ್ಲಿ ಲ್ಯಾಂಡ್‌ಲೆಸ್ ಲೇಬರರ್ಸ್ ಇದ್ದಾರೆ, ಅವರು ಬಿತ್ತನೆಗಾಗಿ ೫೦೦ ರೂಪಾಯಿಗಳನ್ನು ಶ್ರೀಮಂತರಿಂದ ಸಾಲ ತೆಗೆದು

ಕೊಂಡು ೧೫ ವರ್ಷ ಹಾಕಿದರೂ ಶ್ರೀಮಂತ ಡೈರೆಕ್ಟ್ ಟೆನೆಂಟ್ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಅವನೇ ಟೆನೆಂಟ್ ಆಗಿ ಇರುತ್ತಾನೆ. ಊರಿನಲ್ಲಿ ಅರ್ಧ ಭೂಮಿ ಶ್ರೀಮಂತನಿಗೆ ಇರುತ್ತದೆ. ಲ್ಯಾಂಡ್ ಲೆಸ್ ವರ್ಕರ್ ಎಂದು ಗುದ್ದಲಿಯನ್ನು ತೆಗೆದುಕೊಂಡು ದುಡಿಯುವುದಕ್ಕೆ ಹೋಗುತ್ತಾನೆ. ಇಂತ ಒಂದು ಪೆಕ್ಯೂಲಿಯರ್ ಸರ್‌ಕಮ್‌ಸ್ಟೆನ್ಸ್ ವೆಸ್ಟೆಡ್ ಇಂಟರೆಸ್ಟ್ ಫ್ಯೂಡಲ್ ಕ್ಲಾಸಸ್ ಯಾವ ರೂಪದಲ್ಲಿ ಮಾಡುತ್ತಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಟ್ಟಿರುತ್ತೇನೆ. ಇಷ್ಟೊಂದು ಹೀನ ಪರಿಸ್ಥಿತಿಯಲ್ಲಿ ನಮ್ಮ ಜನರ ಇರುವಾಗ ಹೆಚ್ಚು ಜನತೆಯಲ್ಲಿ ವಿಶ್ವಾಸ ಹುಟ್ಟಬೇಕಾದರೆ ಡೈರೆಕ್ಟ್ ಪ್ರಿನ್ಸಿಪಲ್ಸ್ ಏನು ಇದೆ ಫಂಡಮೆಂಟಲ್ ರೈಟ್ಸ್ ಏನು ಇದೆ ಅದಕ್ಕೆ ಒಂದು ರೂಪ ಕೊಡಬೇಕು ಯಾವ ಗ್ಯಾರಂಟಿ ಕೊಡಬೇಕೆನ್ನುವುದರ ಬಗ್ಗೆ ಯಾವ ಅಶೂರೆನ್ಸ್ ಇಲ್ಲ ಕಾಯಿದೆಯಲ್ಲಿ ಯಾವ ಹಕ್ಕು ಕೊಡದೆ ಇರುವುದರಿಂದ ಹಳ್ಳಿಗಳಲ್ಲಿ ಇರುವ ಲೇಬರ್ ವರ್ಕರ್ ಏನು ಇದಾರೆ ಅವರಿಗೆ ಏನೇನೂ ಸಹಾಯವಾಗುವುದಿಲ್ಲ. ಇತ್ತ ಕಡೆ ಗಮನ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಅವರ ಅಂಧ ಶ್ರದ್ಧೆ ಮತ್ತು ಮೂಢ ನಂಬಿಕೆ ಕಾರಣ. ಹಳ್ಳಿಗಳಲ್ಲಿ ಇರುವ ಅಗ್ರಿಕಲ್ಚರಲ್ ಲೇಬರರ್ಸ್‌ನ್ನು ಎಕ್ಸಪ್ಲಾಯಿಟ್ ಮಾಡುವ ಕಾಲ ಹೋಯಿತು. ಅವರಿಗೆ ನಿಮ್ಮ ರಕ್ಷಣೆಗಾಗಿ ನಿಮ್ಮ ಬೆನ್ನು ಹಿಂದೆ ನಿಂತಿದ್ದೇವೆ ಎನ್ನುವ ಧೈರ್ಯ ಕೊಡಬೇಕು. ಅವರಿಗೆ ಸಾಕಷ್ಟು ರಕ್ಷಣೆ ಕೊಡುವುದಕ್ಕೆ ಪ್ರಯತ್ನಮಾಡಬೇಕು. ಅಗ್ರಿಕಲ್ಚರಲ್ ಲೇಬರರ್ಸ್ ಬಿತ್ತನೆ ಮಾಡುವುದಕ್ಕೋಸ್ಕರ ಶ್ರೀಮಂತರ ಹತ್ತಿರ ಹಣವನ್ನು ತೆಗೆದುಕೊಂಡು ಅವರಿಗೆ ಮಾರ್ಟಗೇಜ್ ಮಾಡಿರುತ್ತಾರೆ. ಇದರಿಂದ ಹಳ್ಳಿಯಲ್ಲಿ ಅರ್ಧಭೂಮಿ ಶ್ರೀಮಂತರದೇ ಆಗಿದೆ. ಆದುದರಿಂದ ಪ್ರೊಸಿಷನ್ ರೈತನಿಗೆ ಸಿಕ್ಕುವ ಹಾಗೆ ಮಾಡಬೇಕು. ತಮ್ಮ Statement of Objects and Reasons ನಲ್ಲಿ directed in the case of pledgedsrelease of the pledge articles ಎಂದು ಬಂದಿದೆ. ಅದರಲ್ಲಿ ಇದರ ಬಗ್ಗೆ ಇನ್ನೂ ಸ್ವಲ್ಪ ಸ್ಪಷ್ಟವಾಗಿ ಇರಬೇಕಾಗಿತ್ತು.

SRI K. H. RANGNATH.—The hon. Member may see section 4(e).

ಶ್ರೀ ವಿ. ಎಸ್. ಪಾಟೀಲ್.—ಲ್ಯಾಂಡಲೆಸ್ ಲೇಬರರ್ಸ್ ಮಾರ್ಟ್‌ಗೇಜ್ ರೂಪದಲ್ಲಿ ಏನು ಸಾಲ ತೆಗೆದುಕೊಂಡಿರುತ್ತಾರೆ ಅದು ರಿಟರ್ನ್ಸ್ ಆಗಬೇಕು. ಇದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವುದರ ಬಗ್ಗೆ ಇನ್ನೂ ವಿವರವಾಗಿ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಸ್ಪಷ್ಟವಾದ ಅರ್ಥ ಬರುವ ಹಾಗೆ ಹಾಕ್ಕಿದ್ದರೆ ಒಳ್ಳೆಯದಿತ್ತು. Much could be said on both sides ಎನ್ನುವುದಕ್ಕಿಂತ It has already been said in favour of down-trodden ಎನ್ನುವ ಶಬ್ದಗಳನ್ನು ಹಾಕಿದ್ದಿದ್ದರೆ ಅವರಿಗೆ ರಿಲೀಫ್ ಸಿಗುತ್ತದೆ. ಈ ತರಹ ಅರ್ಥ ಬರುವ ರೀತಿಯಲ್ಲಿ ಸ್ಪಷ್ಟವಾಗಿ ಇಟ್ಟಿದ್ದರೆ ಯಾವ ಉದ್ದೇಶಕೋಸ್ಕರ ಲೆಜಿಸ್ಲೇಷನ್ ತರುತ್ತಿದ್ದೇವೆಯೋ ಆ ಉದ್ದೇಶ ನೆರವೇರುತ್ತದೆ ಆತರಹ ಖಡಾಖಂಡಿತ ಶಬ್ದಗಳಲ್ಲ ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಕೊಟ್ಟು ಇನ್ನೂ ಕೆಲವು ಶಬ್ದಗಳನ್ನು ಸೇರಿಸಿ, ಇದೇ ಸೆಷನ್‌ನಲ್ಲಿ ಪಾಸ್ ಆಗುವಂತೆ, ತಮ್ಮ ಕಡೆಯಿಂದಲೇ ಅಮೆಂಡ್‌ಮೆಂಟ್ ತಂದಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ ರೂರಲ್ ಏರಿಯಾನಲ್ಲಿ ೮೦ ಪರ್ಸೆಂಟ್ ಅಗ್ರಿಕಲ್ಚರಲ್ ವರ್ಕರ್ಸ್ ಇದ್ದಾರೆ. ಇವರು ಇವತ್ತು ಶ್ರೀಮಂತರಿಗೆ ಸಾಲಗಾರರಾಗಿದ್ದಾರೆ ಶ್ರೀಮಂತ ಡೈರೆಕ್ಟ್ ಟೆನೆಂಟ್ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತಿದ್ದಾನೆ. ಸಾಲಗಾರ ಹಾಗೆ ಗುದ್ದಲಿ ಹಿಡಿದುಕೊಂಡು ದುಡಿಯುವುದಕ್ಕೆ ಹೋಗುತ್ತಾನೆ. ಟ್ರಿಬ್ಯೂನಲ್‌ನಲ್ಲಿ ಇಂತಹ ಕೇಸಸ್ ಬಂದಿದೆ. ಇವನ್ನು ಡಿಸೈಡ್ ಮಾಡುತ್ತಿದ್ದೇವೆ. ನಮ್ಮ ಡಿಸಿಷನ್ ಕೋರ್ಟ್‌ನಲ್ಲಿ ಎಷ್ಟು ನಿಂತುಕೊಳ್ಳುತ್ತದೊ ಅರ್ಥವಾಗುತ್ತಾ ಇಲ್ಲ. ಇದರಿಂದ ಅವರು ಋಣಮುಕ್ತರಾಗುವುದಕ್ಕೋಸ್ಕರ ಒಂದು ಕ್ಲಾರಿಫಿಕೇಷನ್ ಅಥವಾ ಎಕ್ಸಪ್ಲನೇಷನ್‌ನ್ನು ಮಾನ್ಯ ಮಂತ್ರಿಗಳು ತರುತ್ತಾರೆ, ತರುವುದಕ್ಕೆ ಹೆಸಿಟೇಟ್ ಮಾಡುವುದಿಲ್ಲ ಎಂದು ಹೇಳಿ ಮಾನ್ಯ ಡೆಪ್ಯುಟಿ ಸ್ಪೀಕರ್ ರವರು ನನಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರತಕ್ಕ ಡೆಟ್ ರಿಲೀಫ್ ಬಿಲ್ ಏನು ಇದೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ, ಕೆಲವು ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರಿಗೆ ಇದು ಗೊತ್ತಿಲ್ಲದ ವಿಚಾರವಲ್ಲ. ಈ ಬಿಲ್ಲಿನ ವ್ಯಾಪಕತ್ವ ಏನಿದ್ದರೂ ಸಾಲ ತೆಗೆದುಕೊಂಡಿರುವುದಕ್ಕೆ ಡಾಕ್ಯುಮೆಂಟ್, ಪ್ರಾಮಿಸರಿ ನೋಟ್ ವಗೈರೆ ಇದ್ದರೆ ಮಾತ್ರ ಅದಕ್ಕೆ ಒಳಪಡುತ್ತದೆ, ಯಾವ ಡಾಕ್ಯುಮೆಂಟ್, ಪ್ರಾಮಿಸರಿ ನೋಟ್, ಯಾವ ದಾಖಲಾತಿಯೂ ಇಲ್ಲದೇ ಇದ್ದರೆ ಈ ಬಿಲ್ಲು ಒಳಪಡುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ, ಹಳ್ಳಿಗಾಡಿನಲ್ಲಿ ಒಂದು ಪಲ್ಲ ಭತ್ತ ಈ ವರ್ಷ ಸಾಲ ತೆಗೆದುಕೊಂಡಿದ್ದರೆ, ಮುಂದಿನ ವರ್ಷ ಅದಕ್ಕೆ ಇನ್ನೊಂದು ಪಲ್ಲ ಬತ್ತ ಕೊಡಬೇಕು, ಇದಕ್ಕೆ ಹುಲಿ ಎಂದು ಹೇಳುತ್ತಾರೆ. ಇನ್ನು ಕೆಲವು ಕಡೆ

೧೦೦ ರೂಪಾಯಿ ಸಾಲ ಕೊಟ್ಟರೆ ಅದಕ್ಕೆ ಒಂದು ಪಲ್ಲ ಭತ್ತ ಬಡ್ಡಿ ಕೊಡಬೇಕು. ಇದಕ್ಕೆ ಯಾವ ದಾಖಲಾತಿ ಇರುವುದಿಲ್ಲ; ಇದು ಯಾವ ಇನ್‌ಕಂ ಟ್ಯಾಕ್ಸ್‌ಗೆ ಹೋಗುವುದಿಲ್ಲ, ಯಾವ ಬ್ಯಾಂಕ್‌ ಕಛೇರಿಗೂ ಹೋಗುವುದಿಲ್ಲ. ಕೂಲಿಗಾರರು ಗತ್ಯಂತರವಿಲ್ಲದೆ ಈ ರೀತಿ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಅವನು ಉಪವಾಸ ಬೀಳಬೇಕಾಗುತ್ತದೆ. ಆದುದರಿಂದ ನಾವು ಅಂಥವರ ರಕ್ಷಣೆ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು ನಾವು ಶಾಸನವನ್ನು ತಂದಿದ್ದೇವೆ ಎಂದು ಇಟ್ಟುಕೊಳ್ಳಿ. ನಾಳೆ ಈ ಒಂದು ಶಾಸನ ಬಂದ ಕೂಡಲೇ ಸಣ್ಣಪುಟ್ಟ ಹಿಡುವಳಿಗಾರರಿಗೆ ೧೦೦ ರೂಪಾಯಿ ಸಾಲ ಕೊಡುವವರು ಯಾರೂ ಇರುವುದಿಲ್ಲ. ಆಗ ಅವನು ಹೇಗೆ ಜೀವನ ಮಾಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಎಲ್ಲರ ಹಿತರಕ್ಷಣೆ ಮಾಡಬೇಕು ಎಂದು ಹೊರಟಿರುವಾಗ ಕೂಡಲೇ ಆತನಿಗೆ ಕಾಲಕಾಲಕ್ಕೆ ಬೇಕಾದಂಥ ಮೊಬಲಗನ್ನು ಕೊಡತಕ್ಕಂಥ ವ್ಯವಸ್ಥೆ ಮಾಡದೇ ಹೋದರೆ ಬಹಳ ಅನ್ಯಾಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಪಂಚಾಯಿತಿಗಳಲ್ಲಿ ಸೊಸೈಟಿಗಳಿವೆ. ಈ ಸೊಸೈಟಿಗಳಲ್ಲಿ ಸಾಲಕ್ಕಾಗಿ ಅರ್ಜಿ ಹಾಕಿಕೊಂಡರೆ ಶೂರಿಟಿಬೇಕು ಎಂದು ಕೇಳುತ್ತಾರೆ. ಶೂರಟಿ ಕೊಡುವವರು ಯಾರೂ ಇರುವುದಿಲ್ಲ. ಶೂರಟಿ ಕೊಡದೇ ಹೋದರೆ ಸಾಲ ಸಿಕ್ಕುವುದಿಲ್ಲ. ಆದುದರಿಂದ ಎಷ್ಟು ಬಡ್ಡಿ ಕೊಟ್ಟರೂ ಚಿಂತೆ ಇಲ್ಲ, ಶ್ರೀಮಂತರ ಹತ್ತಿರ ಸಾಲ ತೆಗೆದುಕೊಳ್ಳೋಣ ಎನ್ನುವ ಕೊನೇ ತೀರ್ಮಾನಕ್ಕೆ ಬಂದು ಸಾಲಕ್ಕೆ ಬೀಳುತ್ತಾನೆ. ಈ ರೋಗದ ಮೂಲವನ್ನು ನಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಇದನ್ನು ಬುಡ ಮೇಲು ಮಾಡುವುದಕ್ಕೆ ಹೋದರೆ ಕಷ್ಟವಾಗುತ್ತದೆ. ಇನ್ನೊಂದು ಉದಾಹರಣೆ ಹೇಳುತ್ತೇನೆ. ಇವತ್ತು ಕೂಲಿಗಾರ ಸಾಲ ತೆಗೆದುಕೊಳ್ಳಬೇಕಾದರೆ ಅವನು ತನ್ನ ಮನೆಯಲ್ಲಿ ಇರುವಂಥ ಪಾತ್ರೆ, ಒಡವೆ ಮುಂತಾದುವನ್ನು ತೆಗೆದುಕೊಂಡು ಹೋಗಿ ಇಟ್ಟು ಸಾಲ ತೆಗೆದುಕೊಳ್ಳುತ್ತಾನೆ. ಇದಕ್ಕೆ ಯಾವ ಪ್ರಾಮಿಸರಿ ನೋಟ್ ಆಗಲೀ, ಡಾಕ್ಯುಮೆಂಟ್ ಆಗಲೀ ಇರುವುದಿಲ್ಲ; ಯಾವ ದಾಖಲಾತಿಯೂ ಇರುವುದಿಲ್ಲ. ಆದುದರಿಂದ ಸಾಲ ಕೊಟ್ಟವನು ಮಾಲು ತನ್ನದೇ ಎಂದು ಹೇಳಬಹುದು. ಇಂತಹ ಅನೇಕ ವ್ಯವಹಾರಗಳು ನಡೆಯುತ್ತಿವೆ. ಇದಕ್ಕೆ ಈ ಬಿಲ್ಲಿನ ವ್ಯಾಪಕತ್ವ ಬರುವುದಿಲ್ಲವೇನೋ ಎನ್ನುವ ಸಂಶಯ ಇದೆ. ಇವತ್ತು ಪ್ರಧಾನ ಮಂತ್ರಿಗಳು ೨೦ ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ಇದೂ ಒಂದು. ಯಾರು ಸಾಲಕ್ಕಾಗಿ ಜೀತ ಮಾಡುತ್ತಾರೆ, ಯಾರೋ ಮಾಡಿದ ಸಾಲಕ್ಕೆ ತಾನು ಜೀತ ಮಾಡಬೇಕು ಎನ್ನುವ ಅಭಿಪ್ರಾಯ ಹೋಗಲಾಡಿಸತಕ್ಕಂಥಾದ್ದು ಈ ಬಿಲ್ಲಿನ ಉದ್ದೇಶವಾಗಿದೆ, ಅದನ್ನು ಒಪ್ಪಲೇಬೇಕು. ಇದರಲ್ಲಿ ಸಂಸ್ಕೃತಿಯ ಭಾವನೆ ಅಡಕವಾಗಿದೆ. ನಮ್ಮಲ್ಲಿ ಒಂದು ಗಾದೆ ಇದೆ. ೧೦೦ ರೂಪಾಯಿ ಸಾಲ ಮಾಡಿದ್ದರೆ ಬರುವ ಜನ್ಮದಲ್ಲಿ ಎತ್ತಾಗಿ ಹುಟ್ಟಬೇಕಾಗುತ್ತದೆ ಎಂದು. ಎಷ್ಟೇ ಸಾಲವಿರಲಿ ಋಣಮುಕ್ತರಾಗಬೇಕು. ಒಂದು ವೇಳೆ ತನ್ನ ಕೈಯಲ್ಲಿ ಸಾಲ ತೀರಿಸುವುದಕ್ಕೆ ಆಗದೇ ಹೋದರೆ ತನ್ನ ಮಗನಿಗೆ ಹೇಳಿ ಹೋಗಬೇಕು. ನಾನು ಇಷ್ಟು ಸಾಲ ಮಾಡಿಕೊಂಡಿದ್ದೇನೆ, ಅದನ್ನು ತೀರಿಸುವ ಜವಾಬ್ದಾರಿ ನಿನ್ನದು ಎಂದು. ಆ ಸಾಲವನ್ನು ತೀರಿಸದೇ ಹೋದರೆ ತನ್ನ ತಂದೆ ನರಕಕ್ಕೆ ಹೋಗುತ್ತಾನೆ ಎನ್ನುವ ಭಾವನೆ ಮಗನಲ್ಲಿ ಇರುತ್ತದೆ. ಇಂತಹ ಭಾವನೆಗಳು ನಮ್ಮ ಜನರಲ್ಲಿ ಬುಡ ಮೂಲದಿಂದ ಬಂದುಬಿಟ್ಟಿದೆ. ಎಲ್ಲಿಯವರೆಗೆ ಇಂತಹ ಭಾವನೆಗಳು ಮೋಡದ ಹಾಗೆ ಕವಿದಿರುತ್ತದೆಯೋ ಅಲ್ಲಿಯವರೆಗೆ ಸಮಾಜದಿಂದ ಜನರನ್ನು ಎತ್ತಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಭಾವನೆ ನನ್ನದು.

ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕ ಬಿಲ್ಲು ಏನಿದೆ ಇದರ ಆಧಾರಸ್ತಂಭ ಎಬಿಸಿಡಿ ಆಲ್ಫಬೆಟಿಕಲ್ ಆರ್ಡರ್‌ನಲ್ಲಿ ಹೋಗುತ್ತದೆ 'ಎ' ಆಲ್ಫಬೆಟಿಕಲ್‌ಗೆ ನಾನು ಇದನ್ನು ಕೊಡುತ್ತೇನೆ. ಶ್ರೀಮಾನ್ ಪಾಟೀಲರು ಹೇಳಿದ ಹಾಗೆ ೨೪೦೦ ರೂಪಾಯಿ ಲಿಮಿಟ್ ಹಾಕಿದ್ದೀರಿ. ೨೪೦೦ ರೂಪಾಯಿ ಉತ್ಪತ್ತಿ ಯಾರಿಗೆ ತಾನೇ ಬರುವುದಿಲ್ಲ? ಈ ಇನ್‌ಫ್ಲೇಷನ್ ಪೀರಿಡ್‌ನಲ್ಲಿ ೨೪೦೦ ರೂಪಾಯಿ ನಥಿಂಗ್. ಈ ಮೊತ್ತವನ್ನು ಹೆಚ್ಚಿಸಬೇಕು ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಹಿಂದೆ ಅಗ್ರಿಕಲ್ಚರಲ್ ಲೇಬರ್ ಆಕ್ಟ್ ಬಂತು. ಅದು ಸುಪ್ರೀಂಕೋರ್ಟಿನಲ್ಲಿ ಕ್ವಾಷ್ ಆಯಿತು. ಇವತ್ತು ಈ ಹಂತದಲ್ಲಿ ಈ ಬಿಲ್ಲು ಬಂದಿದೆ. ಈ ಬಿಲ್ಲನ್ನು ತಯಾರು ಮಾಡುವಾಗ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡಿ ಮಾಡಿದ್ದಾರೆ. ಆದುದರಿಂದ ಈ ಬಿಲ್ಲನ್ನು ಸ್ವಾಗತಮಾಡಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಸಚಿವರು).—

ಅಧ್ಯಕ್ಷರೆ, ಮಾನ್ಯ ಸ್ನೇಹಿತರುಗಳು ಈ ಬಿಲ್ಲನ್ನು ಸ್ವಾಗತಮಾಡಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳನ್ನು ಸಮರ್ಪಣೆ ಮಾಡುತ್ತೇನೆ. ಈ ಬಿಲ್‌ಮೇಲೆ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಕೆಲವಾರು ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಈ ಬಿಲ್ಲಿನಿಂದ ರೈತ ತನ್ನ ಸಾಲದ ಬಾಧೆಯಿಂದ

ವಿಮುಕ್ತನಾಗುವುದಿಲ್ಲ. ಸಾಲವನ್ನು ವಾಪಸ್ ಕೊಡತಕ್ಕದ್ದನ್ನು ಎರಡು ವರ್ಷದವರೆಗೆ ತಡೆಹಿಡಿಯಲಾಗಿದೆ. ಅಲ್ಲಿಯವರೆಗೆ ಇಂಟರೆಸ್ಟ್ ಅನ್ನು ಅದಕ್ಕೆ ಸೇರಿಸಲಿಕ್ಕೆ ಸಾಧ್ಯವಿಲ್ಲ. ಇಷ್ಟು ಇದರಲ್ಲಿದೆಯೇ ವಿನಹ ಅವನು ಸಾಲದಿಂದ ಬಿಡುಗಡೆಯಾಗಲಿಕ್ಕೆ ಸಾಧ್ಯವಿಲ್ಲ. ಅವನ ಸಾಲವನ್ನು ವಜಾ ಮಾಡತಕ್ಕದ್ದರ ಬಗ್ಗೆ ಈ ಸಮಯದಲ್ಲಿ ನಾನು ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಪ್ರಭಾಕರ್ ಅವರು ಮಾತನಾಡುತ್ತಾ ಪೀನಲ್ ಇಂಟರೆಸ್ಟ್ ಬಗ್ಗೆ ಸಹಕಾರ ಸಂಘಗಳವರೇ ಹಾಕುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತಿನದಿವಸ ಸರ್ಕಾರದವರು ಹಣ ಕೊಟ್ಟಮೇಲೆ ಅದನ್ನು ವಸೂಲುಮಾಡಬೇಕಾಗುತ್ತದೆ. ಕೊಟ್ಟ ಹಣವನ್ನು ವಸೂಲುಮಾಡದೆ ಇರತಕ್ಕ ಪರಿಸ್ಥಿತಿ ಇನ್ನೂ ಬಂದಿಲ್ಲ, ಅಷ್ಟು ಶ್ರೀಮಂತ ಸರ್ಕಾರ ಇವತ್ತಿನದಿವಸ ನಮ್ಮಲ್ಲಿಲ್ಲ. ಆದರೆ ಖಾಸಗಿ ಸಾಲಗಾರರು ಕೊಡತಕ್ಕ ಸಾಲಕ್ಕೂ ಸರ್ಕಾರದವರು ಕೊಡತಕ್ಕ ಸಾಲಕ್ಕೂ ವ್ಯತ್ಯಾಸವಿದೆ. ಅವನು ಹಣವನ್ನು ಇನ್‌ವೆಸ್ಟ್ ಮಾಡಿದಮೇಲೆ ಅದರ ಮೇಲೆ ಬಡ್ಡಿಯನ್ನು ಸಂಪಾದನೆ ಮಾಡತಕ್ಕ ದೃಷ್ಟಿಯಿಂದ ಸಾಲ ಕೊಡುತ್ತಾನೆ. ಸರ್ಕಾರ ಕೊಡತಕ್ಕ ಸಾಲ ರೈತರಾಗಲಿ, ವ್ಯವಸಾಯದ ಕೂಲಿಗಾರರಾಗಲೀ ತಮ್ಮ ಕಾಲ ಮೇಲೆ ತಾವು ನಿಂತು ಕೊಳಲಿ ಎನ್ನುವ ಅಭಿಪ್ರಾಯದ ಹಿನ್ನಲೆಯಲ್ಲಿ ಅವನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಸಾಲ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಪೀನಲ್ ಇಂಟರೆಸ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ನಾನು ಅದರ ಬಗ್ಗೆ ಉತ್ತರ ಕೊಡಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಬೇರೆ ಸಮಯದಲ್ಲಿ ವಿಚಾರ ಮಾಡೋಣ. ಮಾನ್ಯ ವಿ. ಎನ್. ಪಾಟೀಲರು ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಡೆಫಿನೀಷನ್ ಆಫ್ ವೀಕರ್‌ಸೆಕ್ಷನ್ 2400 ರೂಪಾಯಿಗಿಂತ ಹೆಚ್ಚು ಇದರಲ್ಲಿ ಇರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅಗ್ರಿಕಲ್ಚರಲ್ ಸ್ಮಾಲ್ ಫಾರ್ಮರ್ ಯಾರಿದ್ದಾರೆ ಅವರ ಬಗ್ಗೆ ಎರಡು ಹೆಕ್ಟಾರ್‌ಗೆ ಒಂದು ಯುನಿಟ್ ಎಂದು ಡೆಫಿನಿಷನಲ್ ಕೊಟ್ಟಿವೆ, ಅದಕ್ಕೋಸ್ಕರ ಸಾಮಾನ್ಯರಿಗೆ ಅನ್ವಯವಾಗುವ ರೀತಿಯಲ್ಲಿ 2400 ರೂಪಾಯಿಗಳು ಒಂದು ನಿಗದಿ ಮಾಡಿದ್ದೇವೆ. ಇದನ್ನು ನಾಲ್ಕೈದು ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡುವ ಪ್ರಶ್ನೆ ಸಾಧ್ಯಕ್ಕೆ ಬರುವುದಿಲ್ಲ. ಕಾರ್ಮಿಕವರ್ಗದವರು ಇರಲಿ, ಸಣ್ಣ ಹಿಡುವಳಿದಾರರು ಇರಲಿ, ರೈತ ಕೂಲಿಗಾರರು ಇರಲೀ, ಇಷ್ಟು ವರಮಾನ ಬರತಕ್ಕವರು ಈಬಿಲ್ಲಿನ ವ್ಯಾಪ್ತಿಯೊಳಗೆ ಬರುತ್ತಾರೆ; ಎಂದು ನಾನು ತಿಳಿದುಕೊಂಡಿದ್ದೇನೆ.

ಮಾನ್ಯ ಚಂದ್ರಶೇಖರ್ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಮಾನ್ಯ ಸದಸ್ಯರು ಹೇಳತಕ್ಕದ್ದಕ್ಕೆ ದಾಖಲೆ ವಗೈರೆ ಏನೂ ಇರುವುದಿಲ್ಲ. ರೈತ ಮಾಡಿದಂಥ ಸಾಲವನ್ನು ಅವನ ಮಗ ಕೊಡಬೇಕು ಇಲ್ಲದಿದ್ದರೆ ನರಕಕ್ಕೆ ಹೋಗುತ್ತಾನೆ ಎನ್ನುವುದು ಏನು ಪದ್ಧತಿಯಲ್ಲಿದೆ ಅದನ್ನು ನಾವು ಕಾನೂನಿಂದ ತೆಗೆಯಲಿಕ್ಕೆ ಸಾಧ್ಯವಾಗುವುದಿಲ್ಲ ಅದನ್ನು ತೆಗೆಯಬೇಕಾಗಿದ್ದರೆ ಮಾನ್ಯ ವಿ. ಎನ್. ಪಾಟೀಲರು ಮತ್ತು ನಮ್ಮಪಕ್ಷದ ಕಾರ್ಯಕರ್ತರು ಎಲ್ಲರೂ ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಸರಿಯಾದ ಬುದ್ಧಿ ಹೇಳಬೇಕು. ಈ ಬಗ್ಗೆ ನಾವು ಶಿಕ್ಷಣ ಕೊಡಬೇಕಾಗುತ್ತದೆ. ಈ ಅಂಧ ಶ್ರದ್ಧೆಯಿಂದ ಅವನನ್ನು ನಾವು ತೆಗೆಯಬೇಕಾಗುತ್ತದೆ. ಅಲ್ಲಿಯವರೆಗೆ ಇದಕ್ಕೆ ನಾವು ಏನನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಬರೀ ಕಾನೂನಿನಲ್ಲಿ ಇದನ್ನು ತೆಗೆಯುತ್ತೇವೆಂದು ಹೇಳಿದರೆ ಅದು ಆಗುವುದಿಲ್ಲ. ಇಂಥ ಕಾನೂನು ಬಂದಾಗ ಅದರ ಅನುಕೂಲವನ್ನು ಪಡೆಯುವುದಕ್ಕೆ ಬರ ಜನರಿಗೆ ತಿಳಿಸಬೇಕು. ಇದರ ಬಗ್ಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಇವತ್ತಿನದಿವಸ ಲ್ಯಾಂಡರಿಫಾರಂಸ್ ಬಂದಿದ್ದರೂ ಕೂಡ ಗೇಣಿದಾರರು ಡಿಕ್ಲರೇಷನ್ ಕೊಡದೆ ಇರತಕ್ಕ ಪರಿಸ್ಥಿತಿ ಇದೆ. ಇದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇರತಕ್ಕ ಕಾನೂನನ್ನು ನಾವು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ಈ ಒಂದು ಕಾನೂನಿನ ಬಗ್ಗೆ ಹೆಚ್ಚಾಗಿ ಹೇಳುವುದು ಏನು ಇಲ್ಲ. ಇದನ್ನು ಒಪ್ಪಬೇಕು ಎಂದು ನಾನು ಮಾನ್ಯ ಸದಸ್ಯರುಗಳಲ್ಲಿ ಕೇಳಿಕೊಳ್ಳುತ್ತೇನೆ

MR. DEPUTY SPEAKER.—I will now put the consideration motion to the vote of the House.

The question is:

"That the Karnataka Debt Relief Bill, 1975, be taken into consideration."

The motion was adopted

CLAUSE 2

MR. DEPUTY SPEAKER.—I will now take up the consideration of the Bill clause by clause.

There is an amendment given notice of by the Hon. Minister. the Hon. Minister may please move the amendment.

SRI K. H. RANGANATH.—I beg to move

'After sub-clause (b), thefollowing sub-clause shall be inserted, namely.—

'(bb) any amount recoverable as an arrear of land revenue'

In sub-clause (f) after item (iv), the following item shall be inserted, namely:

"iv (a) the Life Insurance Corporation of India"

MR. DEPUTY SPEAKER.—Amendment moved :

After sub-clause (b) the following sub-clause shall be inserted :

"(bb) any amount recoverable as an arrear of land revenue."

In sub-clause (f) after item (iv), the following item shall be inserted :

'iv (a) the Life Insurance Corporation of India.'

ಶ್ರೀ ಕೆ. ಎಚ್. ರಂಗನಾಥ್.—ಇದರ ಮೇಲೆ ಹೆಚ್ಚಿಗೆ ಹೇಳಬೇಕಾದ ಅಂಶವೇನೂ ಇಲ್ಲ.

MR. DEPUTY SPEAKER.—I will put the amendment to the vote of the House. The question is :

'After Sub-clause (b), the following sub-clause shall be inserted:

"(bb) any amount recoverable as an arrear of land revenue."

In sub-clause (f) after item (iv), the following item shall be inserted :

"iv (a) the Life Insurance Corporation of India"

The motion was adopted.

Clause 2 as amended was added to the Bill.

CLAUSES 3–8

MR. DEPUTY SPEAKER.—Is there any amendment to clause 3 ?

SRI K. H. RANGANATH.—No.

MR. DEPUTY SPEAKER.—As there are no amendments I will put clauses 3 to 8 to the vote of the House.

The question is :

"That Clause 3 to 8, both inclusive, do stand part of the Bill.'

The motion was adopted.

Clauses 3 to 8, both inclusive, we are added to the Bill.

CLAUSE 1 etc.,

MR. DEPUTY SPEAKER.—The question is :

"That Clause 1, the long Title, the Preamble and the Enacting formula do stand part of the Bill."

Clause 1, the long Title, the Preamble and the Enacting formula were added to the bill.

MOTION TO PASS

SRI K. H. RANGANATH.—I beg to move :

'That Karnataka Debt Relief Bill, 1975, as amended be passed.'

MR. DEPUTY SPEAKER.—The question is ;

'That Karnataka Debt Relief Bill, 1975, as amended be passed.'

The motion was adopted and the Bill as amended was passed.

Mysore State Agricultural Universities Bill' 1973

Motion to Consider

SRI N. CHICKKE GOWDA (Minister for Agriculture and Animal Husbandry).— I beg to move.

"That the Mysore State Agricultural Universities Bill, 1973 as reported by the Joint Select Committee be taken into consideration."

MR. DEPUTY SPEAKER.— Motion moved.

"That the Mysore State Agricultural Universities Bill, 1973 as reported by the Joint Select Committee be taken into consideration,"

SRI N. CHICKKEGOWDA.—The main object of bringing this Bill before the State Legislature and referring it to the Joint Select Committee is this. The Main consideration was that the State had become very big and there was necessity of having two Universities in Karnataka and of upgrading the Agricultural College of Dharwar. The Joint Select Committee had several sittings-about nine sittings. It was referred to the Joint Select Committee on 29th May 1973. The Bill has sought to difine the role and powers of the Pro-Chancellor, the mode of appointment of the Vice-Chanceller in order to remove the possibility of non-academicians coming into Vice-Chancellorships and also placing age limit in the age of the Vice-Chancellor. As I said earlier, the Joint Select Committee has had several sittings and they have heard several representatives and they have met several academicians. Apart from the field of agriculture, there are very salient features. We are going to have several representatives representing the